ಶ್ರೀ ಟಿ. ಸಿ. ಬಸಪ್ಪ.—ಈಗ ತಾವು (f) ಪ್ರಶ್ನೆಗೆ ಒದಗಿಸುವ ಉತ್ತರದಲ್ಲಿ ಶ್ರೀ ಕೆ. ಹೆಂಜೀರಪ್ಪನವರು ಒಂದು ತಾತ್ಕಾಲಿಕ ವರದಿಯನ್ನು ಕಳುಸಿದ್ದಾರೆಂದು ತಿಳಿಸಿದ್ದೀರಿ. ಆ ವರದಿಯ ಮುಖ್ಯಾಂಶಗಳೇನು?

Sri KADIDAL MANJAPPA.—He has reported that no liability can be fixed on any individual Officer.

ಶ್ರೀ ಟಿ. ಸಿ. ಬಸಪ್ಪ.—ಅನಂತರ ಆ ಸ್ಥಾನಕ್ಕೆ ಅಧಿಕಾರಿಗಳಾಗಿ ಬಂದ ಶ್ರೀ ಜೆ. ಅಪ್ಪಾಜಿಗೌಡರಿಗೂ ಮತ್ತು ಆಗ ಅಲ್ಲಿ ಟ್ರೆಜರಿ ಆಫೀಸರಾಗಿದ್ದ ಶ್ರೀ ಡಿ. ಮುನಿಸ್ವಾಮಿಯವರಿಗೂ ಏನಾದರೂ ಬಾಂಧವ್ಯ, ಸಂಬಂಧ ಇತ್ತೇ?

Sri KADIDAL MANJAPPA.—Notice.

ಶ್ರೀ ಟಿ. ಸಿ. ಬಸಪ್ಪ.—ಶ್ರೀ ಡಿ. ಮುನಿಸ್ವಾಮಿಯವರು ಶ್ರೀ ಅಪ್ಪಾಜಿಗೌಡರ ಅಳಿಯಂದಿರಲ್ಲವೇ?

Sri KADIDAL MANJAPPA.—I do not know. I must be definite before I answer the question.

ಶ್ರೀ ಟಿ. ಸಿ. ಬಸಪ್ಪ.—ಅವರು ಈ ವಿಚಾರವನ್ನು ಕೈಕೊಳ್ಳುವುದಕ್ಕೆ ಮುಂಚೆತವಾಗಿ "ನನಗೂ ಮತ್ತು ಟ್ರೆಜರಿ ಅಧಿಕಾರಿಗಳಿಗೂ ಸಂಬಂಧವಿರುತ್ತದೆ, ಆದ್ದರಿಂದ ಈ ಪ್ರಶ್ನೆಯನ್ನು ನಾನು ಡೀಲ್ ಮಾಡುವುದಕ್ಕಾಗುವುದಿಲ್ಲ" ಎಂದು ಏನಾದರೂ ತಿಳಿಸಿದ್ದಾರೆಯೇ?

Sri KADIDAL MANJAPPA.—He has dealt with all the Officers, not only with Sri D. Muniswamy. Even if he happens to be a relation of his, there is the Government to finally decide the matter.

ಶ್ರೀ ಟಿ. ಸಿ. ಬಸಪ್ಪ.—ಇಂಥ ಸಂದರ್ಭಗಳಲ್ಲಿ ಈ ಹಿಂದೆ ಶ್ರೀ ಕೆ. ಗುರುದತ್, ಶ್ರೀ ನಂಜರಾಜ ಅರಸ್, ಶ್ರೀ ದೊರೆಸ್ವಾಮಿ ಅಯ್ಯರ್ ಮತ್ತು ಶ್ರೀ ಅಬ್ದುಲ್ ವಾಜೀದ್ ಇಂಥವರಿಂದ ಸರ್ಕಾರಕ್ಕೆ ಹಣ ಭರ್ತಿಮಾಡಿಸಿಕೊಂಡಿಲ್ಲವೇ?

Sri KADIDAL MANJAPPA.—I do not know under what circumstances that order was passed.

ಶ್ರೀ ಟಿ. ಸಿ. ಬಸಪ್ಪ.—ಈ ಹಿಂದೆ ಯಾರಿಗಾದರೂ ಇಂಥ ರಿಯಾಯಿತಿಗಳನ್ನು ಕೊಡಲಾಗಿತ್ತೆ?

Sri KADIDAL MANJAPPA.—Notice.

ಶ್ರೀ ಟಿ. ಸಿ. ಬಸಪ್ಪ.—ಆ ರೀತಿ ಆರ್ಡರು ಮಾಡಬೇಕಾಗಿದ್ದರೆ, does it depend upon persons or principles?

Sri KADIDAL MANJAPPA.—It certainly does not depend upon persons, but it depends upon principles. There is a world of difference between a person misappropriating money himself and somebody misappropriating on account of negligence.

ಶ್ರೀ ಟಿ. ಸಿ. ಬಸಪ್ಪ.—ಹಿಂದೆ ಆ ರೀತಿಯಾಗಿ ಜಾರಿ ಮಾಡಿ, ಈಗ ಅದರಂತೆ ಜಾರಿ ಮಾಡದೆ ಇರಲು ಕಾರಣವೇನು?

Mr. SPEAKER.—That question need not be answered.

---

*Detection of Criminal Cases for the last five years.*

Q.—85. Sri B. HUTCHE GOWDA (Turuvekere).—

Will the Government be pleased to state:—

(*a*) the total number of criminal cases reported during the last five years to Police for the offences of murder, theft, dacoity, riots and disturbance, pick-pockets, cheating, etc.;

(*b*) the number detected in each kind of crime;

(*c*) whether it is not a fact that crimes are on the increase year by year;

(*d*) the action taken to improve efficiency of the Police?

A.—Sri H. SIDDAVEERAPPA (Minister for Home and Industries).—

(*a*) and (*b*) Statement appended below.

(*c*) Yes; in some classes only.

(*d*) 1. Better recruitment and training of officers and men.

2. Greater and intensive supervision over the work of the subordinates.

3. Timely measures are being taken from time to time to control the cognizable crimes by taking preventive action, vigilantly watching the active criminals, enforcing proper beat system in urban area; and night kavals in rural parts.

4. Establishment of Scientific Laboratory to help investigation and Wireless Station to disseminate information regarding commission of grave crimes.

Statistical statement of Crimes Registered, Detected, etc.

| Class of crimes | 1948-49 | | 1949-50 | | 1950-51 | | 1951-52 | | 1952-53 (for nine months) | |
|---|---|---|---|---|---|---|---|---|---|---|
| | Reported | Detected | Reported | Detected | Reported | Detected | Reported | Detected | Reported | Detected |
| 1. Murder .. | 139 | 112 | 117 | 89 | 162 | 130 | 171 | 128 | 168 | 132 |
| 2. Theft .. | 7,034 | 3,185 | 5,783 | 2,843 | 7,590 | 3,810 | 7,317 | 4,204 | 6,667 | 3,993 |
| 3. Dacoity .. | 55 | 51 | 55 | 32 | 65 | 24 | 67 | 28 | 68 | 33 |
| 4. Riots and Disturbances .. | 193 | 154 | 163 | 126 | 201 | 162 | 249 | 200 | 165 | 129 |
| 5. Pick-pockets .. | 150 | 120 | 186 | 141 | 139 | 123 | 197 | 176 | 132 | 120 |
| 6. Cheating .. | 200 | 124 | 158 | 117 | 282 | 194 | 184 | 130 | 147 | 101 |

ಶ್ರೀ ಬಿ. ಹುಚ್ಚೇಗೌಡ.—ತಾವು ಇಲ್ಲಿ ಕೊಟ್ಟಿರುವ ತಪಶೀಲಿನಲ್ಲಿ ಎಷ್ಟು ಕೇಸುಗಳಲ್ಲಿ ತಪ್ಪುಸಾಬೀತಾಗಿ ಶಿಕ್ಷೆಯಾಗಿದೆ?

*ಶ್ರೀ ಎಚ್. ಸಿದ್ದವೀರಪ್ಪ.—That figure is not available. ತಮ್ಮ ಪ್ರಶ್ನೆಯ ಪ್ರಕಾರ ಥಾರ್ಜುಪೀಡ್ ಕೇಸುಗಳನ್ನು ಮಾತ್ರ ತಿಳಿಸಿರುತ್ತೆ. ಶಿಕ್ಷೆಯಾಗಿರತಕ್ಕವರ ಸಂಖ್ಯೆ ಈಗ ನಮ್ಮಲ್ಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈಗ ಪತ್ತೆಯಾಗಿರುವ ಕೇಸುಗಳ ಪರ್ಸೆಂಟೇಜಿಲ್ಲಾ 30 ರಿಂದ 40ರ ಒಳಗೆ ಇದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—48-49ನೆಯ ಸಾಲಿನಲ್ಲಿ ಪತ್ತೆ ಮಾಡಿರುವ ಕಳುವು ಕೇಸುಗಳ ಮಿನಿಮಂ ಡಿಟೆಕ್ಷನ್ 45% ಇರುತ್ತದೆ. 1951-52ರಿಂದ ಈ ಕಳುವು ಕೇಸುಗಳಪತ್ತೆ 57% ವರೆಗೂ ಹೋಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—Not more than that ಅಲ್ಲವೇ?

Sri H. SIDDAVEERAPPA.—Up to that.

ಶ್ರೀ ಬಿ. ಹುಚ್ಚೇಗೌಡ.—ಈ ಕೇಸುಗಳ ಸಂಖ್ಯೆ ಹೀಗೆ ವರ್ಷ ವರ್ಷ ಹೆಚ್ಚಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಎಚ್. ಸಿದ್ದವೀರಪ್ಪ.—ನಾನಾಗಲೇ, ತಮಗೆ ತಿಳಿಸಿದ ಹಾಗೆ, ಇಲ್ಲಿಯ ವರೆಗೂ ಆ ಕ್ರಿಮಿನಲ್ ಟ್ರೈಬ್ಸ್‌ಗಳ ಮೇಲೆ ಒಂದು ಹತೋಟಿಯಿತ್ತು. ಆದರೆ ಈಗ ಅವರನ್ನು ನಾವು ಆ ಒತ್ತಾಯಗಳಿಂದ ಖುಲಾಸೆಮಾಡಿ ಬಿಟ್ಟಿದ್ದೇವೆ. ಈಗ ಅವರು ಸ್ವತಂತ್ರವಾಗಿ ಎಲ್ಲೆಲ್ಲಿಯೂ ತಿರುಗುತ್ತಿದ್ದಾರೆ. ಆದರೆ ಈಗ ಅವರಮೇಲೆ ಹಿಂದೆ ಇದ್ದಂಥ ಪ್ರಿವೆಂಟೀವ್ ಫೆಷರ್ಸುಗಳನ್ನು ತೆಗೆದುಕೊಳ್ಳಬೇಕಾದರೆ, ಈಗಿರತಕ್ಕ ರಾಜ್ಯಾಂಗದ ಪ್ರಕಾರ, ಇದು ಅವರ ಫಂಡಮೆಂಟಲ್ ರೈಟ್ಸಿಗೆ ಸ್ವಲ್ಪ ವಿರೋಧವಾಗಿರುತ್ತದೆ. ಹೀಗೆ ಅವರ ಬಗ್ಗೆ ಪ್ರಿವೆಂಟಿವ್ ಕಾರ್ಯಕ್ರಮ ತೆಗೆದುಕೊಳ್ಳಲು ಕೆಲವು ಆಡ್ತಿ ಆತಂಕಗಳಿರುವುದೇ ಕಾರಣ.

ಶ್ರೀ ಬಿ. ಹುಚ್ಚೇಗೌಡ.—ಆ ಕ್ರಿಮಿನಲ್ ಟ್ರೈಬ್ಸ್‌ಗೆ ಸೇರಿರತಕ್ಕ ಜನರು ಹಾಗೆ ಯಾವ ನಿರ್ಬಂಧವೂ ಇಲ್ಲದಂತೆ ತಿರುಗಾಡಕೂಡದು ಎಂದು ಇಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಧಿ ಈಗ ಲಕ್ಷ್ ಡೇಟ್ ಆಗಿ ಹೋಗಿದೆ, ಆ ವಿಚಾರ ತಮಗೂ ಗೊತ್ತೇ ಇದೆ. What I have stated is, there are some constitutional guarantees about freedom of person. ಅನೇಕ ಸಂದರ್ಭಗಳಲ್ಲಿ ಈ ಹಿಂದಿನ ದೆಶೆಯಿಂದ ಕಾನೂನು ಪ್ರಕಾರ ಮುಂದುವರಿಯಲು ಕೆಲವು ತೊಡಕುಗಳಿರುತ್ತವೆ.

ಶ್ರೀ ಬಿ. ಹುಚ್ಚೇಗೌಡ.—ಈಗ 3 ಜನ ಡಿ.ಐ.ಜಿ. ಗಳಿರುವುದಕ್ಕೆ ಬದಲಾಗಿ ಇನ್ನೂ 6 ಜನ ಡಿ.ಐ.ಜಿ ಗಳಾದರೆ ಆಗ ಇದೆಲ್ಲಾ ನಿರೀಕ್ಷೆಗೆ ಬರುತ್ತದೆಂಬುದು ತಮ್ಮ ಅಭಿಪ್ರಾಯವೇ?

ಶ್ರೀ ಎಚ್. ಸಿದ್ದವೀರಪ್ಪ.—ಮೂರು ಜನ ಡಿ.ಐ.ಜಿ ಗಳ ಜೊತೆಗೆ ಇನ್ನಾರು ಜನ ಡಿ.ಐ.ಜಿಗಳನ್ನು ನೇಮಕ ಮಾಡಬೇಕೆಂದಿರುವುದಿಲ್ಲ. ಈಗ ಇರತಕ್ಕ ಮೂರು ಜನ ಡಿ.ಐ.ಜಿಗಳನ್ನು ಐ. ಪಿ. ಎಸ್. ಕೇಡರ್‌ನಲ್ಲಿ ಸೇರಿಸಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಮೂರು ಜನರನ್ನೂ ಹಾಗೆ ಐ.ಪಿ.ಎಸ್. ಕೇಡರಿನಲ್ಲಿ ನಮ್ಮ ಸರ್ಕಾರದವರ ಅಭಿಪ್ರಾಯವನ್ನು ತೆಗೆದುಕೊಂಡು ತಾನೆ ಫಿಕ್ಸಪ್ ಮಾಡಿರುವುದು?

ಶ್ರೀ ಎಚ್. ಸಿದ್ದವೀರಪ್ಪ.—ಈ ಐ.ಪಿ.ಎಸ್ ಹುದ್ದೆಗಳನ್ನು ಫೈನಲೈಜ್ ಮಾಡುವಾಗ ಅವರು ಆ ರೀತಿ ಫಿಕ್ಸ್ ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದವರು ಈ ಐ.ಪಿ.ಎಸ್ ಸ್ಕೀಮಿಗೆ ಯಾವಾಗ ಒಪ್ಪಿಗೆ ಕೊಟ್ಟದ್ದು?

ಶ್ರೀ ಎಚ್. ಸಿದ್ದವೀರಪ್ಪ.—ನಿರ್ದಿಷ್ಟವಾದ ತಾರೀಖು ಗೊತ್ತಿಲ್ಲ. It is only two years ago.

ಶ್ರೀ ಬಿ. ಹುಚ್ಚೇಗೌಡ.—ಅಗಿನಿಂದಲೂ ಈ ತಕ್ಷೀರುಗಳ ಸಂಖ್ಯೆ ಜಾಸ್ತಿಯಾಗುತ್ತ ಬಂದಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ಕಾರಣ ಅದಲ್ಲ. ನಾನಾಗಲೇ ಅರಿಕೆ ಮಾಡಿಕೊಂಡ ಪ್ರಕಾರ, ಅದಕ್ಕೆ ನಾನಾ ಕಾರಣಗಳಿವೆ. ಎಕನಾಮಿಕ್ ಕಂಡೀಷನ್ ನಿಂದಲೂ ಕೇಸುಗಳು ಜಾಸ್ತಿಯಾಗಿರುತ್ತವೆ. ಆ ಕ್ರಿಮಿನರ್ ಟ್ರೈಬ್ಸ್ ಮೆಂಬರುಗಳನ್ನು ಕಾನೂನಿನ ಆಬರೇಷನ್ ಇಂದ ತಪ್ಪಿಸಿದ್ದು ಕೂಡ ಕೇಸುಗಳ ಸಂಖ್ಯೆ ಜಾಸ್ತಿಯಾಗುವುದಕ್ಕೆ ಕಾರಣವಾಯಿತು ಎಂಬುದಾಗಿ ನನಗೆ ಬಂದಿರುವ ವರದಿಗಳಿಂದ ಹೊರಪಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ಈ ಐ.ಪಿ.ಎಸ್ ಸ್ಕೀಮಿಗೆ ನಮ್ಮ ಅಧಿಕಾರಿಗಳು ಸೇರಿದಮೇಲೆ ಅವರಿಗೆ ಸಂಬಳ ಸಾರಿಗೆಗಳು ಜಾಸ್ತಿ ಯಾಗುತ್ತಲ್ಲವೇ?

* Asterisk indicates that the speech has not been revised by the Member concerned.

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಪೋಲೀಸ್ ಕಾರ್ಯಸ್ಪೆಬರ್ ಗಳಿಗೂ ದಫೇದಾರರಿಗೂ, ಸಬ್-ಇನ್‌ಸ್ಪೆಕ್ಟರರ್ ಗಳಿಗೂ ಮತ್ತು ಇನ್‌ಸ್ಪೆಕ್ಟರುಗಳಿಗೂ, ಅದೇರೀತಿ ಸಂಬಳ ಜಾಸ್ತಿ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೋದ ವರ್ಷ ಸಬ್ ಇನ್‌ಸ್ಪೆಕ್ಟರುಗಳಿಗೆ ಸಂಬಳವನ್ನು ಜಾಸ್ತಿ ಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಇಷ್ಟರಮಟ್ಟಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿದ್ದಾಗ್ಯೂ ಅಧಿಕಾರಿಗಳ ದಕ್ಷತೆಗೆ ಕುಂದಕಾಗುಂಟಾಗಿರಲು ಕಾರಣವೇನು? ಈ ಅಧಿಕಾರಿಗಳೆಲ್ಲರೂ ಆ ಐ.ಪಿ.ಎಸ್ ಸ್ಕೀಮಿಗೆ ಸೇರಿದ ನಂತರ ತಮಗೆ ಅವರ ಮೇಲಿರಬೇಕಾದ ಕಂಟ್ರೋಲನ ಬಿಗಿ ತಪ್ಪಿ ಹೋಗಿರುವುದೇ ಅದಕ್ಕೆ ಕಾರಣವೆಂದು ತಿಳಿಯೋಣವೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಲ್ಲ. ನಾನಾಗಲೇ ತಮ್ಮಲ್ಲಿ ಅರಿಕೆಮಾಡಿಕೊಂಡಿರುವ ಪ್ರಕಾರ, ಈ ಐ.ಪಿ.ಎಸ್ ಸ್ಕೀಮು 1953ನೇ ಜನವರಿ 23ರಲ್ಲಿ ಜಾರಿಗೆ ಬಂದಿತು. ಅದು ಜಾರಿಗೆ ಬಂದಮೇಲೆ, ಬಹುಶಃ ಕೆಲವರು ತಮ್ಮ ಮನಸ್ಸಿನಲ್ಲಿ ಈ ಸರ್ಕಾರಕ್ಕೆ ಈ ಐ.ಪಿ.ಎಸ್ ಅಧಿಕಾರಿಗಳಮೇಲೆ ಏನೂ ಹತೋಟಿಯಿರುವುದಿಲ್ಲವೆಂದು ತಿಳಿದುಕೊಂಡಿರಬಹುದು. ಆದರೆ ರೂಲ್ಸು ಪ್ರಕಾರ ನಮಗೆ ಅವರಮೇಲೆ ಸಂಪೂರ್ಣ ಹತೋಟಿ ಅಧಿಕಾರವಿದೆ. ಈ ಐ.ಪಿ.ಎಸ್ ಅಧಿಕಾರಿಗಳು ಯಾವ ಯಾವ ಸ್ಟೇಟಿನಲ್ಲಿ ಕೆಲಸದಲ್ಲಿರುತ್ತಾರೋ ಆ ಸ್ಟೇಟುಗಳ ಗವರ್ನಮೆಂಟುಗಳಿಗೆಲ್ಲಾ ಅವರ ವಿಚಾರವಾಗಿ disciplinary action ತೆಗೆದುಕೊಳ್ಳಲು ಸಂಪೂರ್ಣ ಅಧಿಕಾರವಿದೆ.

Rules 9, 10, 11, 12, and 13 of Indian Administration and Police (Pay), 1950 Rules deal with disciplinary action. Rule 8 says :

> "The Central Government may frame, in consultation with Provincial Governments, rules to regulate the conduct of members of the Indian Police Service."

ಆದರೆ ಇವುಗಳನ್ನೂ Finalise ಆಗಿಲ್ಲ. Draft ತಯಾರಾಗಿದೆ. Till then, these rules are in force. According to them we can censure or withhold increment or promotion including stoppage at an efficiency bar or even order dismissal from service.

According to rule 10, before imposing any such punishment, the Government concerned shall consult the Federal Public Service Commission and shall not depart from the Commission's advice save only for exceptional reasons to be recorded in writing. ಇಷ್ಟೆಲ್ಲಾ ಇದೆ. Therefore, if anybody is under the impression that this Government have no control over the I.P.S. Officers, I can only say it will have to be corrected.

Sri B. HUTCHE GOWDA.—You cannot take disciplinary action independently of the Central Government or the Federal Public Service Commission?

Mr. SPEAKER.—It is made clear.

ಶ್ರೀ ಬಿ. ಹುಚ್ಚೇಗೌಡ.—ಅವರ ಮೇಲೆ action ತೆಗೆದುಕೊಳ್ಳುವುದಕ್ಕೆ ತಮಗೆ ಸ್ವಾತಂತ್ರ್ಯವಿದೆಯೇ ಅಥವಾ ಇಲ್ಲವೇ ಎಂಬುದೇ ಗೊತ್ತಾಗಲಿಲ್ಲವಲ್ಲಾ?

Mr. SPEAKER.—You may take it for what it is worth.

Sri B. HUTCHE GOWDA.—He said at one time that he has full control. Next time he said that he has got control according to the rules. But according to the rules, he has no control.

Mr. SPEAKER.—You put any other question.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ತಮಗೆ ಅವರಿಗೆಲ್ಲಾ ಸಂಬಳ ಕೊಡತಕ್ಕ ಅಧಿಕಾರ ಒಂದು ಮಾತ್ರ ಇದ್ದು ಬಾಕಿ ಅಧಿಕಾರಗಳಾವುವೂ ಇಲ್ಲವೆಂದು ತಿಳಿದುಕೊಳ್ಳೋಣವೇ?

Sri H. SIDDAVEERAPPA.—I may state once again that we have full control over them.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಸಂಬಳ ಕೊಡುವವರಿಗೇ ಪೂರ್ಣ ಹತೋಟಿ ಇರಬೇಕಾದದ್ದು ನ್ಯಾಯವೋ ಅಲ್ಲವೋ?

ಶ್ರೀ ಎಚ್. ಸಿದ್ದವೀರಪ್ಪ.—ಇದೆಯೆಂದು ಆಗಲೇ ಹೇಳಿದ್ದೇನೆ. I assert we have full control.

ಶ್ರೀ ಪಿ. ಆರ್. ರಾಮಯ್ಯ.—ದಕ್ಷತೆಯನ್ನು ಹೆಚ್ಚಿಸಲು ಕೈಕೊಂಡಿರುವ ಕಾರ್ಯಕ್ರಮಗಳಲ್ಲಿ "establishment of a scientific laboratory to help investigation" ಎಂದು ಹೇಳಲಾಗಿದೆ. ಈಗ ಬೆಂಗಳೂರು ಸಿಟಿಯಲ್ಲಿ ಎಲೆಕ್ಟ್ರಿಕ್ ಬಲ್ಬುಗಳನ್ನು ಕಳ್ಳತನ ಮಾಡುತ್ತಿದೆಯೆಂದು ತಿಳಿಸಿರುವ ವಿಷಯದಲ್ಲಿ ಪೋಲೀಸಿನವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ; ಎಷ್ಟು ಬಲ್ಬುಗಳನ್ನು ಪತ್ತೆ ಮಾಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಬಲ್ಬುಗಳು ಎಲ್ಲಿ ಕಳ್ಳತನವಾಗಿದೆಯೆಂದು ಹೇಳುತ್ತೀರಿ?

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರು ಸಿಟಿ ಬಡ್ರಿಗಳಲ್ಲಿ ದೀಪದ ಬಲ್ಬುಗಳು ಕಳ್ಳತನವಾಗುತ್ತಿವೆಯೆಂಬ ಸಮಾಚಾರ ಪತ್ರಿಕೆಗಳಲ್ಲೂ ಬಂದಿತ್ತು. ಎಲೆಕ್ಟ್ರಿಕ್ ಇಲಾಖೆಯವರು ಪೋಲೀಸ್ ಇಲಾಖೆಯವರಿಗೆ ಈ ವಿಚಾರ ತಿಳಿಸಿರುವುದಾಗಿ ಹೇಳಿದ್ದರು. ಎಂಥ ಕೇಸುಗಳನ್ನು ತನಿಖೆ ಮಾಡಿದೆಯೇ? ಎಷ್ಟು ಬಲ್ಬುಗಳು ಪತ್ತೆಯಾಗಿವೆ?

(No answer).

ಶ್ರೀ ಪಿ. ಆರ್. ರಾಮಯ್ಯ—ಪ್ರತಿಯೊಂದು ಸ್ಕ್ವೇರ್ ಸರಹದ್ದಿನಲ್ಲಿ ಎಷ್ಟೆಷ್ಟು ತಕ್ಸೀರು ನಡೆಯುತ್ತಿವೆಯೆಂಬ ಬಗ್ಗೆ ಅವರು ಡೈರಿ ಇಟ್ಟುಕೊಂಡಿರುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಟ್ಟುಕೊಂಡಿರುತ್ತಾರೆ.

ಶ್ರೀ ಪಿ ಆರ್. ರಾಮಯ್ಯ.—ಬೆಂಗಳೂರು ಸಿಟಿಯಲ್ಲಿ ಈಚೆಗೆ ಕಳ್ಳತನ ಜಾಸ್ತಿಯಾಗುತ್ತಿದೆ. ಎಷ್ಟೋ ವೇಳೆ ಹಗಲನ್ನಲೂ ಕೂಡ ಕಳ್ಳತನ ಆಗುತ್ತಿದೆಯೆಂದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—There is the printed answer. It is on the increase.

Sri P. R. RAMAIYA.—I would like to know whether it has come to the notice of Government that various cases of theft have taken place in the City of Bangalore ?

Sri H. SIDDAVEERAPPA.—Yes; I have already said that the proportion of detection also has kept pace with the increase of crime.

ಶ್ರೀ ಜಿ. ನಾರಾಯಣಗೌಡ.—ತಮ್ಮ ಪಟ್ಟಿಯ ಪ್ರಕಾರ ಕಳ್ಳತನಗಳು ಹೆಚ್ಚಾಗಿ ಪತ್ತೆಯಾಗದಿರುವುದು ಕಂಡುಬರುತ್ತದೆ. ಹಿಂದೆ ಪೋಲೀಸ್ ಉನ್ನತಾಧಿಕಾರಿಗಳಲ್ಲೊಬ್ಬರಾದ ತಿಮ್ಮರಾಜ ಅರಸ್ ಎಂಬವರನ್ನು Detection of Crimes ಭಾಗದಲ್ಲಿ ಸ್ಪೆಷಲೈಸ್ ಮಾಡಿಕೊಂಡು ಬರುವುದಕ್ಕೆ ತಾನೆ ಹೊರದೇಶಕ್ಕೆ ಕಳುಹಿಸಿದ್ದು ?

Sri H. SIDDAVEERAPPA.—I am told he was specialised in that branch.

ಶ್ರೀ ಜಿ. ನಾರಾಯಣಗೌಡ.—ಅವರು Specialise ಮಾಡಿಕೊಂಡು ಬಂದದ್ದರಿಂದ ನಮ್ಮ ದೇಶಕ್ಕೆ ಏನು ಪ್ರಯೋಜನವಾಯಿತು ?

ಶ್ರೀ ಎಚ್. ಸಿದ್ದವೀರಪ್ಪ —ಆಗಿದೆ; ಒಂದು ಉದಾಹರಣೆ ಹೇಳುವುದಾದರೆ, ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ ಅಗಾಧವಾಗಿ ಡಕಾಯಿತಿಗಳು ಆಗುತ್ತಿದ್ದ ಸಂದರ್ಭದಲ್ಲಿ ತಿಮ್ಮರಾಜ ಅರಸ್‌ರವರನ್ನು ಅಲ್ಲಿಗೆ ಹಾಕಿತ್ತು. He used his special skill and experience in the detection of some cases there.

---

*Site for Taluk Office Buildings at Bhadravathi.*

*Q.*—101. Sri B. MADHAVACHAR (Bhadravati).—

Will the Government be pleased to state :

(*a*) whether they have received requests from the public and the municipality for locating the Taluk Office buildings at the Old Town ;

(*b*) whether they are aware that a site was selected in front of the middle school, Old Town, a few years ago ?

*A.*—Sri KADIDAL MANJAPPA (Minister for Revenue and Public Works).—

(*a*) Yes.
(*b*) Yes.

ಶ್ರೀ ಬಿ. ಮಾಧವಾಚಾರ್.—ಈ ರೀತಿ ಸೈಟಿನ ಚುನಾವಣೆಯಾದ ಮೇಲೆ ಸರ್ಕಾರದವರೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ಸೀಸಿಷ್ ಕಾರ್ಯಕ್ರಮ ನಡೆಯುತ್ತಿದೆ.

ಶ್ರೀ ಬಿ. ಮಾಧವಾಚಾರ್.—ಹಾಲಿ ತಾಲ್ಲೂಕಾಫೀಸು ಹಳೆಯ ಟೌನಿನಲ್ಲೇ ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಬಿ. ಮಾಧವಾಚಾರ್.—ಹಾಗಾದರೆ Constructionನ್ನನ್ನು ಬೇಗ ಪುರು ಮಾಡುತ್ತೀರಾ ?

(No answer).

---

*Tenders sanctioned for Public Works Department works in Hassan District during 1951-52 and 1952-53.*

*Q.*—103. Sri B. N. BORANNA GOWDA (Belur).—

Will the Government be pleased to state :

(*a*) the works given over for execution on tender by the Engineering Department in Hassan District during 1951-52 and 1952-53 ;

(*b*) the names of these contractors;

(*c*) the estimated cost of works proposed to be given over on tenders in this department ;

(*d*) the rules that are being observed while sanctioning the tenders ?

*A.*—Sri KADIDAL MANJAPPA (Minister for Revenue and Public Works).—

(*a*) and (*b*) Statement appended below.

(*c*) All works of original nature and costing Rs. 5,000 and above are disposed of after calling for tenders.

(*d*) The following rules are being observed :

(i) The P.W.D. Officers are vested with the power of acceptance of tenders to the limits noted below,